ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2019–**20 ದಿನಾಂಕ: 12–02–2020

# ಮಾಧ್ಯಮದವರ ಗಮನಕ್ಕೆ

ಫೆಬ್ರವರಿ 17 ರಿಂದ ಆರಂಭವಾಗುವ 2020 ನೇ ಸಾಲಿನ ಅಧಿವೇಶನದ ವರದಿಗಾಗಿ ಈಗಾಗಲೇ ಮಾಧ್ಯಮ ಮಾನ್ಯತೆ ಹೊಂದಿರುವ ಮಾಧ್ಯಮ ಪ್ರತಿನಿಧಿಗಳು ನೇರವಾಗಿ ತಮ್ಮ ಭಾವಚಿತ್ರಗಳೊಂದಿಗೆ ವಿಧಾನಸಭಾ ಹಾಗೂ ವಿಧಾನ ಪರಿಷತ್ ಕಾರ್ಯಾಲಯದಲ್ಲಿ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳಬಹುದು.

ಮಾಧ್ಯಮ ಮಾನ್ಯತೆ ಹೊಂದಿರದ ರಾಷ್ಟ್ರ ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳ ಮಾಧ್ಯಮ ಪ್ರತಿನಿಧಿಗಳು ತಮ್ಮ ಸಂಸ್ಥೆಯ ಮುಖ್ಯಸ್ಥರ ಶಿಫಾರಸ್ಸು ಪತ್ರ ಹಾಗೂ ಗುರುತಿನ ಚೀಟಿಯ ಪ್ರತಿಯೊಂದಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯ ಸುದ್ದಿ ಮತ್ತು ಪತ್ರಿಕಾ ಶಾಖೆಯ ಶ್ರೀ ಜಡಿಯಪ್ಪ ಗೆದ್ಲಗಟ್ಟಿ, ಸಹಾಯಕ ನಿರ್ದೇಶಕರು ಇವರಿಗೆ 13–02–2020 ರೊಳಗೆ ಸಲ್ಲಿಸಲು ಕೋರಿದೆ.

# ಪತ್ರಿಕಾ ಪ್ರಕಟಣೆ

## 2019 ನೇ ಸಾಲಿನ ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ

ಬೆಂಗಳೂರು ಫೆಬ್ರವರಿ 12 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವಾರ್ಷಿಕ ಕ್ರೀಡಾ ಕೂಟ– 2019 ಅನ್ನು ಫೆಬ್ರವರಿ 14 ರಂದು ಬೆಳಿಗ್ಗೆ 9–00 ಗಂಟೆಗೆ ನಗರದ ಕೆ.ಎಸ್.ಅರ್.ಪಿ. ಕ್ರೀಡಾಂಗಣ, ಕೋರಮಂಗಲ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ.

ನಿವೃತ್ತ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರಾದ ಶ್ರೀಮತಿ ನೀಲಮಣಿ ಎನ್. ರಾಜು ಅವರು ಕ್ರೀಡಾ ಕೂಟದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಸಮಾರಂಭವನ್ನು ಉದ್ಘಾಟಿಸಲಿದ್ದಾರೆ.

## ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ

### ತಿಂಗಳ ಅತಿಥಿಯಾಗಿ ನೃತ್ಯ ಕಲಾವಿದೆ ಮಾತಾ ಬಿ. ಮಂಜಮ್ಮ ಜೋಗತಿ

ಬೆಂಗಳೂರು ಫೆಬ್ರವರಿ 12 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆಬ್ರವರಿ 15 ರ ಶನಿವಾರದಂದು ಸಂಜೆ 4–00 ಗಂಟೆಗೆ ನಗರದ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಜೋಗತಿ ನೃತ್ಯ ಕಲಾವಿದೆ ಮತ್ತು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಮಾತಾ ಬಿ. ಮಂಜಮ್ಮ ಜೋಗತಿ ಅವರು ತಿಂಗಳ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ವಿವಿಧ ಹುದ್ದೆಗಳ ಮೂಲ ದಾಖಲೆಗಳ ಪರಿಶೀಲನೆ

**ಬೆಂಗಳೂರು ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ 'ಸಿ' ವೃಂದದ ತಾಂತ್ರಿಕ ಹುದ್ದೆಗಳಾದ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮಾದರಿ ವಸತಿ ಶಾಲೆ (ನವೋದಯ) ಗಳಲ್ಲಿನ ಸ್ನಾತಕೋತ್ತರ ಪದವೀಧರರ ಕನ್ನಡ ಭಾಷಾ ಶಿಕ್ಷಕರು, ಇಂಗ್ಲೀಷ್ ಭಾಷಾ ಶಿಕ್ಷಕರು, ಹಿಂದಿ ಭಾಷಾ ಶಿಕ್ಷಕರು, ಗಣಿತಶಾಸ್ತ್ರ ಶಿಕ್ಷಕರು, ಸಮಾಜ ವಿಜ್ಞಾನ ಶಿಕ್ಷಕರು, ಭೌತಶಾಸ್ತ್ರ ಶಿಕ್ಷಕರು, ರಸಾಯನಶಾಸ್ತ್ರ ಶಿಕ್ಷಕರು, ಗಣಕಯಂತ್ರ ಶಿಕ್ಷಕರ ಹುದ್ದೆಗಳು ಹಾಗೂ ಗ್ರಂಥಪಾಲಕರು, ಮಹಿಳಾ ಶುಶ್ರೂಷಕಿಯರ ಹುದ್ದೆಗಳ ಮೂಲದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳು ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲ http://kpsc.kar.nic.in ದಲ್ಲಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ಶಿಕ್ಷಕರ ಹುದ್ದೆಗಾಗಿ ಮೂಲದಾಖಲೆಗಳ ಪರಿಶೀಲನೆ

**ಬೆಂಗಳೂರು ಫೆಬ್ರವರಿ 12 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಈ ಕೆಳಕಂಡ ಗ್ರೂಪ್ 'ಸಿ' ತಾಂತ್ರಿಕೇತರನ ಹುದ್ದೆಗಳ 1:3 ಅನುಪಾತದಲ್ಲಿ ಮೂಲದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ದಿನಾಂಕ: 06-02-2020 ರಂದು ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಹುದ್ದೆಗಳ ವಿವರ: ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಕನ್ನಡ ಭಾಷಾ ಶಿಕ್ಷಕರು 44 (38+06 ಹೈಕ)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಆಂಗ್ಲ ಭಾಷಾ ಶಿಕ್ಷಕರು 49 (40+09 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಹಿಂದಿ ಭಾಷಾ ಶಿಕ್ಷಕರು 46 (35+11 ಹೈ.ಕ)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಗಣಿತ ಶಿಕ್ಷಕರು ಗಣಿತ 8 (29+9 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಸಾಮಾನ್ಯ ವಿಜ್ಞಾನ ಶಿಕ್ಷಕರು 35 (28+7 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಸಮಾಜ ವಿಜ್ಞಾನ ಶಿಕ್ಷಕರು 42 (33+9 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಗಣಕಯಂತ್ರ ಶಿಕ್ಷಕರು 34 (30+4 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ ಗಳಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರು 39 (34+5 ಹೈ.ಕ.)

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ (ನವೋದಯ) ದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು 06

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ (ನವೋದಯ) ದಲ್ಲಿ ಕಲಾ ಶಿಕ್ಷಕರು 04.

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಆರ್ಟ್ ಅಂಡ್ ಕ್ರಾಫ್ಟ್ ಶಿಕ್ಷಕರು 48 (36+12 ಹೈ.ಕ.)

## MUNICIPALIKA, FIRST OF ITS KIND EVENT ON SMART AND SUSTAINABLE CITY SOLUTIONS OPENS IN BENGALURU :

## IT'S PART OF FUTURE CITIES, A 360 DEGREE EVENT ON CITY DEVELOPMENT

Bengaluru, February 12 (Karnataka Information) : Municipalika, the 16th International Exhibition and Conference on Smart and Sustainable city solutions, opened today at the Palace Grounds. It is a part of a larger Future Cities event covering all aspects of the city.

The show was inaugurated by the Chief Minister Mr B S Yediyurappa along with a host of dignitaries including new Minister for Urban Development Mr B A Basavaraja (Byrati Basavaraj) and the Mayor of Bengaluru Mr Gautham Kumar, top brass of the Host State, and the Union Government, besides, urban and municipal officials and stakeholders in the urban and housing sector from all over India and from abroad. Among the important countries represented are Canada (through the province of Ontario), Netherlands, United Kingdom, United States of America United Arab Emirates

Municipalika is co-located with CAPEx (Construction, Architecture, Planning and Engineering Expo) and AAM (Architecture in the Age of Millennials - the first-of-its-kind exhibition and conference).

Future Cities exhibition and conference is the only of its kind forum for exchanging ideas and experiences. As India is undergoing massive urban development, innovative solutions are required for making the cities smarter and sustainable. These topics are covered in the Exhibition and Conference.

It is the only of its kind gathering of 2000 delegates from 300 cities. 150+ exhibitors from all over India and abroad are displaying their solutions for smart and sustainable cities. The event is organised with support and participation of Ministries of the Governments of India and Karnataka, dealing with different aspects of urban development. The State Government of Karnataka is the largest participant in the event as the Host State. Uttar Pradesh, Rajasthan and Assam have large participation as the Partner States. Madhya Pradesh and Chattisgarh are present as the Feature States. Bruhat Bengaluru Mahanagara Palike (BBMP) is the Host City and Municipal Corporation of Greater Mumbai (MCGM) is the Partner City of the event.

A large number of other states and cities, as well as technology and solutions providers are participating in the event, with exhibits and delegates. The international participation comes from Canada via the state of Ontario, which is bringing a delegation of technology companies and service providers for smart and sustainable cities.

The three-day event will have attendees including Ministers, Mayors, Municipal Commissioners, Urban Local Bodies, CEOs of Smart Cities and parastatals, builders and developers along with technology providers, professionals and all urban stakeholders. Faculty and students of architecture, engineering, technology and management institutions are also participating to get exposure to the latest trends. It will prove to be a mega-

networking forum for governments, experts, entrepreneurs and service providers to collectively find solutions to urban challenges. Municipalika provides a platform to evolve, evaluate and share the policies, strategies, cutting-edge technologies and innovations towards smart and sustainable living in cities.

Bengaluru, which is the Information Technology Hub in India has emerged as one of the fastest-growing cities in the country. While the state and the city have led the way in urban development programmes, the rapid urban growth has also thrown up new challenges. Hence, Bengaluru is the perfect host for Future Cities 2020. The event aims at addressing its urban challenges and providing a platform to all major national and international solution providers to deliberate on the problems and prospects, not only for Bengaluru but for cities and towns all over India.

Municipalika showcases a large number of initiatives, best practices, projects and programmes for urban and housing infrastructure development in all cities and towns of Karnataka State by the Urban Development Department, and its urban local bodies, and parastatal agencies, supported by institutions like the Karnataka Urban Infrastructure Development and Finance Corporation (KUIDFC), Directorate of Municipal Administration (DMA), and City Manager's Association of Karnataka (CMAK).

With the ongoing Urban Transformation Missions for 100 Smart Cities, 500 AMRUT cities, PMAY-Housing for All, Swachh Bharat Mission, HRIDAY and Digital Cities, the event aims at discussing strategies, best practices and display of technologies, equipment and solutions for implementing these agenda across the country.

The three-day-long conference and exhibition includes sessions on Smart Cities, Ease of doing business, Urban reforms and Resource mobilisation, Water and WasteWater, Sanitation for All, Solid Waste Management and Recycling, efficient multi-modal urban mobility options, Electric Mobility, Green Cities, Environment and Pollution Control, Urban Infrastructure Development, Housing for All, Digital Cities, E-governance, Safe Secure and Resilient cities. It will have smart city CEOs, Town and country planners, Disaster Management directors, leaders in digital technology and green building systems, leading architects all demonstrating their skill set to combat challenges that the urban sector presents. The exhibition will showcase the latest technologies, products, machinery and processes as well as field demonstrations needed for the fast-paced development needs for various sectors of the built environment.

CAPEx-Construction, Architecture, Planning and Engineering Expo is a platform for showcasing innovative building materials and technologies. Since the year 2019-2020 has been declared as the Year of Construction Technology which also supports the Global Housing Technology Challenge Initiative in India, the

event will provide opportunities to project technological options for infrastructure and building construction and providers of mechanical, electrical, plumbing and fire services (MEPF), green building products, innovative building materials and technologies which are environment-friendly and energy-saving and contribute to speedy construction.

The 16th edition of Municipalika also has the first of its kind co-located event AAM - Architecture in the age of Millennials that will cover topics such as Millenials@Work, Millenials@Public Spaces, Millenials@Home, Millenials@Campuses and Opportunities and Challenges for the Millenial Architects. Millennials are the market's most demanding consumers are also tech-savvy, entrepreneurial and environmentally conscious individuals; hence architecture and building materials industries worldwide are gearing to cater to the rising demand for this segment of consumers.

The event is being co-curated with Conscious Bengaluru and stands to be an exciting opportunity for thought leaders, including architects, interior designers, engineers, urban designers, planners, construction consultants and real estate players to witness this transformation, discuss and debate the emerging trends into Millennial preferences.

The three vision addresses for Future Cities will be delivered by Amitabh Kant, CEO, Niti Ayog; Sanjay Dutt, MD, Tata Realty and Infrastructure Ltd; and Nicholas Bockoff, General Manager

Water Services South India, SUEZ India Pvt Ltd on February 12.

Further, the lead address on February 14 will be given by Peter Murray, London Mayor’s design advocate and curator-in-chief of New London Architecture. The conference will also see the presence of prominent architects like Gauri Gore, Prem Chandavarkar, Anup Naik, Gaurav Rai Choudhary, Arzu Mistry, Srinivasan Murthy, Leena Kumar and other stellar thinkers in the field of architecture.

The City Development Investment Conclave on the sides of Municipalika will be a distinct segment on raising additional financial resources through various channels.

The Co-Partner of the event is UltraTech and Building Technology Partner is Dr. Fixit.

Some of the featured exhibitors include Supreme, Keith, Xylem, Jets, Shubham Aqualink, Samatech, Metsi Enviro Tech Pvt Ltd, SE Controls, JSW Avante, Nest-in, Rostfrei Steels, Time Technoplast Ltd, Re-Leaf, Huliot India, Be comfort Infrastructure, Tranquil, Knest, Banka Bio Loo among others.

The Technology Partner of the event is CDE and Organic Recycling Systems. Hasiru Dala Innovations is the official Waste Management Partner of the event.

Municipal officials, engineers, architects, urban planners, contractors, consultants, developers, builders, system integrators, resident welfare associations and concerned citizens: You are all invited to attend the three-day event. The entry to the event is free.

Municipalika is organised by the Good Governance India Foundation. The exhibition logistics are handled by Fairfest Media Limited, one of India's oldest and leading trade show organisers.

□□□□□□□ □□□□□□□ □□□□ □□□□□□ □□□□□□□□ □□□□□ □□□□□□□: □□□ □□□□□□ □□□□□□

**ಬೆಂಗಳೂರು:** ದ್ವಿತೀಯ ಪಿಯು ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ನಡೆಸುವ ನಿಟ್ಟಿನಲ್ಲಿ ಈ ಬಾರಿ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತ ರವಾನೆ ಮತ್ತು ಸಂರಕ್ಷಣೆ ದೃಷ್ಟಿಯಿಂದರಾಜ್ಯಮಟ್ಟದಲ್ಲಿ ವಿಶೇಷ □□ಕ್ಷಣೆಯೊಂದಿಗೆ ಜಿಲ್ಲಾ ಮಟ್ಟದಲ್ಲೂ ನಿಯಂತ್ರಣ ಕೊಠಡಿಗಳಲ್ಲಿ ಸಿಸಿ ಟಿವಿ ಮೂಲಕ 24 ಗಂಟೆಯೂ ನಿರಂತರವಾಗಿ ನಿಗಾವಹಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

ಪದವಿ ಪೂರ್ವ ಶಿಕ್ಷಣ ಇಲಾಖೆ ಆಶ್ರಯದಲ್ಲಿ ಬುಧವಾರ ಶ್ರೀ ರೇಣುಕಾಚಾರ್ಯ ಕಾನೂನು ಕಾಲೇಜು ಸಭಾಂಗಣದಲ್ಲಿ ನಡೆದ ಬೆಂಗಳೂರು ವಿಭಾಗದ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಮತ್ತು ಸೂಪರಿಟೆಂಡೆಂಟ್‌ಗಳ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪರೀಕ್ಷೆ ಕೆಲಸಗಳಿಗೆ ನಿಯೋಜಿತರಾದ ಪ್ರತಿಯೊಬ್ಬರೂ ಮಕ್ಕಳ ಹಿತದೃಷ್ಟಿಯಿಂದ ಪರೀಕ್ಷಾ ಪಾವಿತ್ರ್ಯತೆ ಕಾಪಾಡಲು ಸಹಕರಿಸಬೇಕು ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು ಮಾತ್ರವೇ ಒಂದು ಬೇಸಿಕ್ ಮೊಬೈಲ್ ಸೆಟ್ ಬಳಸಲು ಅವಕಾಶವಿದ್ದು, ಇತರರಿಗೆ ಮೊಬೈಲ್ ಸೆಟ್ ನಿಷೇಧ ಮಾಡಲಾಗಿದೆ. ವಿಶೇಷ ರಕ್ಷಣಾ

ಲಕ್ಷಣಗಳೊನ್ನೊಳಗೊಂಡ 40 ಪುಟಗಳ ಉತ್ತರಪತ್ರಿಕೆಗಳನ್ನು ಈಗಾಗಲೇ ಸರಬರಾಜು ಮಾಡಲಾಗಿದೆ. ಈ ಬಾರಿ ಪರೀಕ್ಷೆಗೆ ಅನುಭವಿ ಪ್ರಾಚಾರ್ಯರುಗಳನ್ನು ಮುಖ್ಯಅಧೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ. ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಸೇರಿದಂತೆ ಪರೀಕ್ಷಾ ಕೆಲಸಗಳಲ್ಲಿ ತೊಡಗಿದವರಿಗೆ ಪರೀಕ್ಷಾ ಗುರುತಿನ ಚೀಟಿ ನೀಡಲಾಗುತ್ತದೆ. ಗುರುತಿನ ಚೀಟಿ ಹೊಂದಿದವರನ್ನೊರತುಪಡಿಸಿ ಯಾರಿಗೂ ಪರೀಕ್ಷಾ ಕೇಂದ್ರದೊಳಗೆ ಇಲ್ಲವೇ ಪರೀಕ್ಷಾ ಕೇಂದ್ರದ ಸುತ್ತಮುತ್ತ ಅವಕಾಶಗಳಿರುವುದಿಲ್ಲ ಎಂದು ಸಚಿವರು ಹೇಳಿದರು.

ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಸಾಮಗ್ರಿ ರವಾನೆ ಮತ್ತು ಪರೀಕ್ಷಾ ಕೇಂದ್ರಗಳಿಂದ ಸಂಬಂಧಿಸಿದ ಮೌಲ್ಯಮಾಪನ ಕೇಂದ್ರಕ್ಕೆ ಉತ್ತರಪತ್ರಿಕೆ ರವಾನೆಯ ವಾಹನಗಳ ಚಲನವಲನಗಳ ಮೇಲೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸ್ಥಾಪಿಸಲಾಗುವ ವಿಚಕ್ಷಣಾ ಕೇಂದ್ರದಿಂದಲೇ ವೀಕ್ಷಣೆ ಹಾಗೂ ನಿಯಂತ್ರಣ ಮಾಡಲಾಗುತ್ತದೆ ಎಂದರು.

ಬೆಂಗಳೂರು ವಿಭಾಗದ 10 ಶೈಕ್ಷಣಿಕ ಜಿಲ್ಲೆಗಳಿಗೆ ಸಂಬಂಧಿಸಿದ ಅಧೀಕ್ಷಕರು ಮತ್ತು ಸೂಪರಿಟೆಂಡೆಂಟ್ ಗಳ ತರಬೇತಿ ಶಿಬಿರದಂತೆಯೇ ಉಳಿದ ಮೂರು ಕಂದಾಯ ವಿಭಾಗಗಳಲ್ಲೂ ಶಿಬಿರ ನಡೆಸಲಾಗುವುದು ಮತ್ತು ಇದೇ 14ರಂದು ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಪೊಲೀಸ್ ಆಯುಕ್ತರು, ಖಜಾನಾಧಿಕಾರಿಗಳು ಮತ್ತು ಪಿಯು ಉಪನಿರ್ದೇಶಕರೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಲಾಗುವುದು ಎಂದು ಸುರೇಶ್ ಕುಮಾರ್ ತಿಳಿಸಿದರು. ಈಗಾಗಲೇ ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸುಗಮ ಪರೀಕ್ಷಾ ನಿರ್ವಹಣೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಲಾಗಿದೆ ಎಂದರು ಅವರು ಹೇಳಿದರು.

ಪಿಯು ಪರೀಕ್ಷೆಗೆ ರಾಜ್ಯದಲ್ಲಿ ಒಟ್ಟು 1016 ಪರೀಕ್ಷಾ ಕೇಂದ್ರಗಳಿದ್ದು, 6,80,000 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. 2,17,000 ವಿಜ್ಞಾನ, 2,61,000 ವಾಣಿಜ್ಯ, 2,01,000 ಕಲಾ ವಿಭಾಗದಲ್ಲಿ ಪರೀಕ್ಷಾರ್ಥಿಗಳಿದ್ದಾರೆ. ಈಗಾಗಲೇ ಹಾಲ್ ಟಿಕೆಟ್ ಗಳನ್ನು ಒದಗಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ತಮ್ಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಮ್ಮತಮ್ಮ ಪರೀಕ್ಷಾ ಕೇಂದ್ರಗಳಿಂದ ಯಾವುದೇ ರೀತಿಯಲ್ಲೂ ಒಂದೇ ಒಂದು ದೂರು ಬಾರದಂತೆ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಬೇಕು. ನಾನು ಶಿಕ್ಷಣ ಸಚಿವನಾಗಿ ಮಕ್ಕಳೊಂದಿಗೆ ಮಾತನಾಡುವಾಗ ಮಕ್ಕಳು, ಪ್ರಶ್ನೆ ಪತ್ರಿಕೆ ಸೋರಿಕೆ, ಮೌಲ್ಯಮಾಪನದಲ್ಲಾಗುವ ತೊಂದರೆ ಮತ್ತು ನಕಲು ತಡೆಯ ಕುರಿತೇ ನನ್ನನ್ನು ಕೇಳುತ್ತಿದ್ದಾರೆ. ಮಕ್ಕಳ ಈ ಮೂರು ಕೋರಿಕೆಗಳು ಪರೀಕ್ಷೆಗಳ ಪಾವಿತ್ರವನ್ನೇ ಬಯಸುವುದರಿಂದ ಪ್ರತಿಯೊಬ್ಬರೂ ಈ ಕುರಿತು ಹೆಚ್ಚಿನ ಗಮನ ಹರಿಸಬೇಕು ಎಂದರು.

ಪದವಿ ಪೂರ್ವ ಇಲಾಖೆ ನಿರ್ದೇಶಕಿ ಎಂ. ಕನಗವಲ್ಲಿ ಸೇರಿದಂತೆ ಪಿಯು ಮಂಡಳಿಯ ಹಿರಿಯ ಅಧಿಕಾರಿಗಳು, ಉಪನಿರ್ದೇಶಕರು ಭಾಗವಹಿಸಿದ್ದರು. ಎಚ್.ವಿ. ಉಷಾ ದೇವಿ ಸ್ವಾಗತಿಸಿದರು.